ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಸುಮಾರು 259 ಮತ್ತು 9

	ಹೊರ ರೋಗಿಗಳು	ಒಳರೋಗಿಗಳು
ಪುರುಷರು	95	4
ಸ್ತ್ರೀಯರು	97	3
ಮಕ್ಕಳು	67	2
	259	9

ಆ) ಇದೆ
ಇ) 85
ಈ) ಉದ್ಭವಿಸುವುದಿಲ್ಲ

ಬೈಂದೂರು ಆಸ್ಪತ್ರೆ ಅಭಿವೃದ್ಧಿ

876. ಶ್ರೀ ಜಿ.ಎಸ್. ಆಚಾರ್ (ಬೈಂದೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸರ್ಕಾರಿ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವ ಯೋಜನೆ ಸರ್ಕಾರಕ್ಕಿದೆಯೇ;
ಆ) ತಾಲ್ಲೂಕಿನ ಪ್ರಾಮುಖ್ಯ ಕೇಂದ್ರವಾದ ಬೈಂದೂರಿನಲ್ಲಿ ಈ ಸವಲತ್ತು ಅವಶ್ಯವೆಂಬ ಕುರಿತು ಸರ್ಕಾರ ಸಮೀಕ್ಷೆ ನಡೆಸಿ ತೀರ್ಮಾನಕ್ಕೆ ಬರುವುದೇ;

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಇಲ್ಲ
ಆ) ಸಧ್ಯಕ್ಕೆ ಇಲ್ಲ

ಅಲೆಮಾರಿ ಜನಾಂಗದವರಿಗೆ ವಿಶೇಷ ಸಮಗ್ರ ಕೈಗಾರಿಕಾ ಯೋಜನೆ.

921. ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) :– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಅಲೆಮಾರಿ ಜನಾಂಗದವರಿಗೆ ವಿಶೇಷ ಸಮಗ್ರ ಕೈಗಾರಿಕಾ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವ ಪ್ರಸ್ತಾವನೆ ಕಳೆದ 22 ವರ್ಷಗಳಿಂದ ಬಾಕಿ ಇರುವುದು ನಿಜವೇ;
ಆ) ಈ ಯೋಜನೆಯನ್ನು ಜಾರಿಗೊಳಿಸದೆ ಬಾಕಿ ಇಡಲು ಕಾರಣವೇನು? ಹಾಗೂ ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನು;
ಇ) ರೂಪಿಸಿರುವ ಯೋಜನೆಗಳಾವುವು? ಹಾಗೂ ಅನುಷ್ಠಾನಗೊಳಿಸುವ ಜಿಲ್ಲೆ, ತಾಲ್ಲೂಕು ಗ್ರಾಮಗಳ ವಿವರ ನೀಡುವುದು ;
ಈ) 92–93ನೇ ಸಾಲಿನಲ್ಲಿ ಈ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದೇ? ಅನುಷ್ಠಾನಗೊಳಿಸಲು ಆರ್ಥಿಕ ವ್ಯವಸ್ಥೆ ಒಳಪಡಿಸಲಾಗಿದೆಯೇ;
ಉ) ಈ ಬಗ್ಗೆ ಸರ್ಕಾರದಿಂದ ಅನುಷ್ಠಾನಗೊಳಿಸಲು ಮಾರ್ಗ ಸೂಚಿಯನ್ನು ನೀಡಲಾಗಿದೆಯೇ?
ಊ) ಇಲ್ಲದಿದ್ದಲ್ಲಿ, ಇದಕ್ಕೆ ಕಾರಣವೇನು? ಹಾಗೂ ಯಾವಾಗ ಹೊರಡಿಸಲಾಗುವುದು?